ಕಾಗದ ಬರೆದು ಕೇಂದ್ರಸರ್ಕಾರಕ್ಕೆ ಇನ್ನೊಂದು 50 ಕೋಟಿ ರೂಪಾಯಿ ಹಣವನ್ನು ಇವೆರಡಕ್ಕೂ ಕೊಡಬೇಕು. ಈ ಬಡ್ಜೆಟ್ ಅಲೋಕೇಷನ್ ಇನ್‌ಕ್ರೀಸ್ ಮಾಡಬೇಕು ಎಂದು ಹೇಳಿದ್ದೇವೆ. ನಮ್ಮ ಮಾಂಡವಿ ಬಗ್ಗೆ ಅದನ್ನು ಕಳಸ ಹತ್ತಿರ ಮಾಡಬೇಕೆಂದು ಹೇಳಿ ಒಪ್ಪಿಕೊಂಡಿದ್ದರು. ಕಳಸ ಹತ್ತಿರ ಮಾಡುವುದಕ್ಕೆ ಡಿಸ್‌ಕ್ರಿಷನ್ ಕಮಿಟಿಯವರು 500 ಟಿಎಂಸಿ ನೀರನ್ನು ಮಾಂಡವಿಯಿಂದ ಡೈವರ್ಟ್ ಮಾಡಿ ಮಹದಾಯಿಗೆ ತರಬೇಕೆಂದು ಮಾಡಿದ್ದರು. ಆದ್ದರಿಂದ ಸಧ್ಯದಲ್ಲೇ ನಾವು ಗೋವಾ ಅವರ ಜೊತೆ ಮಾತುಕತೆ ಮಾಡುತ್ತೇವೆ. ಈಗ ಎರಡು ರೌಂಡ್ ಮಾತುಕತೆಯಾಗಿದೆ. ಇನ್ನು ಕೊನೆಯದಾಗಿ ಮುಖ್ಯಮಂತ್ರಿಗಳು, ಗೋವಾದ ಮುಖ್ಯಮಂತ್ರಿಗಳು ಇಬ್ಬರೂ ಸಹ ಖುದ್ದಾಗಿ ಮಾತನಾಡಿದ್ದಾರೆ.

ಒಬ್ಬ ಸದಸ್ಯರು : ಇವೆಲ್ಲಾ ಮಾತುಕತೆ ಆಡಿ ಈಗಾಗಲೇ ಒಂದು ವರ್ಷ ಆಯಿತು.

ಅಧ್ಯಕ್ಷರು : ಅವರಿಗೆ ಹೇಳುವುದಕ್ಕೆ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇವತ್ತು ನೀವು ನೀರಾವರಿ ಬಗ್ಗೆ ಅಲ್ಲ, ಪುನರ್ ವಸತಿ ಯಾವ ರೀತಿಯಾಗಿ ಮಾಡಿದ್ದೀರಾ? ನಾವು ಹೇಳುವಂಥದು ಯಾವುದಕ್ಕೂ ಉತ್ತರ ಇಲ್ಲ. ಅವರು ಪರಿಹಾರ ಕೊಡುವುದಕ್ಕೆ ಸಿದ್ಧ ಇಲ್ಲ. ಕಳಕಳಿಯಿಲ್ಲದ ನಿಮ್ಮ ಸರ್ಕಾರದ ವೈಖರಿ ಏನಿದೆ, ಈಗಲಾದರೂ ಪುನರ್ ವಸತಿ ಮಾಡುವುದರ ಬಗ್ಗೆ ಯೋಚನೆ ಮಾಡಿ. ಆಲಮಟ್ಟಿ ಡ್ಯಾಂ ಪೂರ್ಣ ಆದಾಗ ಏನಾಗುತ್ತದೆ? ಅವರೆಲ್ಲರಿಗೂ ಸೈಟ್ ಕೊಡಿ. ಪರಿಹಾರವನ್ನು ಒಂದು ಗಂಟೆಯಲ್ಲಿ ಕೊಡಿ ಅಂದೆ. ನಿಮ್ಮ ಕಂದಾಯ ಮಂತ್ರಿಗಳ ಬಾಯಿಯಿಂದ ಉತ್ತರ ಬರಲಿಲ್ಲ. ಈಗ ಹೇಳಿದರು ಹಾರಂಗಿ ಮುಳುಗಡೆ ಆಯಿತು ಎಂದು. 10 ಸಾವಿರ ಎಕರೆ ಮುಳುಗಡೆ ಆಗಿದೆ. ಅವರಿಗೆ ಪರಿಹಾರವನ್ನು ಘೋಷಣೆ ಮಾಡಲಿಲ್ಲ. 1992 ರಲ್ಲಿ ರೇಟ್ ಫಿಕ್ಸ್ ಮಾಡಿದ್ದು ನಾವು 1997ರಲ್ಲಿ ಇದ್ದೇವಲ್ಲಾ ಈಗ ಫಿಕ್ಸ್ ಮಾಡುವುದಕ್ಕೆ ರೆಡಿ ಇಲ್ಲ. ನಿಮಗೆ ರೈತರ ಬಗ್ಗೆ ಕಳಕಳಿ ಇದೆಯಾ? ಅವರ ಸರ್ವ ನಾಶವಾಯಿತು. ಅವನ ಮೇಲೆ ಇವರು ಅಣೆಕಟ್ಟು ಕಟ್ಟಿ, ಇವರು ಆಡಳಿತ ನಡೆಸುತ್ತಾರೆ ಸ್ವಾಮಿ. ಇದನ್ನು ನಾವು ಪ್ರತಿಭಟನೆ ಮಾಡಿ ಹೊರ ಹೋಗುತ್ತೇವೆ.

(ಮಾನ್ಯ ಶ್ರೀ ಯಡಿಯೂರಪ್ಪನವರು ಹಾಗೂ ಭಾರತೀಯ
ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎನ್. ನಾಗೇಗೌಡ : ನಾನು ಒಂದು ನೋಡುತ್ತಿದ್ದೇನೆ. ನೀವು ವಿರೋಧ ಪಕ್ಷದವರು ಭಾಷಣ ಮಾಡಿ, ನಮಗೆ ಪತ್ರಿಕೆಗಳ ಮೇಲೆ ಬಹಳ ಇಷ್ಟ ಅಂದಿರಿ. ಭಾಷಣ ಮಾಡಿದ ಮೇಲೆ ಉತ್ತರವನ್ನು ಕೇಳುವ ಹಾಗೇ ಇಲ್ಲಾ? ಅರ್ಧಕ್ಕೆ ಹೋಗಿಬಿಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ನಿಮ್ಮ ಉತ್ತರ ಹಾಗೆ ಇದೆ.

ಶ್ರೀ ಕೆ. ಎನ್. ನಾಗೇಗೌಡ : ನೀವು ಕೇಳಿದ ಹಾಗೆ ಅಲ್ಲ ನಾವು ಉತ್ತರ ಕೊಡುವುದು. ಸರ್ಕಾರದ ಉತ್ತರ ಏನಿದೆ ಅದನ್ನು ನಾವು ಕೊಡಬೇಕಾಗುತ್ತದೆ.